ತರಗತಿಯಲ್ಲಿ ಕೂಡ ಅಷ್ಟೇ. ನೂರಕ್ಕೂ ಮಿಕ್ಕು ವಿದ್ಯಾರ್ಥಿಗಳಿದ್ದ ತರಗತಿಗಳಲ್ಲಿ ಕೂಡ ಪಿಸುಮಾತು ಕೇಳಿ ಬರುತ್ತಿರಲಿಲ್ಲ. ಅವರು ಇಟ್ಟುಕೊಂಡಿದ್ದ ಭಯ ಮಾತ್ರ ಇದಕ್ಕೆ ಕಾರಣವಾಗಿರಲಿಲ್ಲ; ಅವರು ಪಾಠ ಮಾಡುವ ಕ್ರಮವೂ ಇದಕ್ಕೆ ಕಾರಣವಾಗಿತ್ತು. ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ವನ್ನು ಅವರು ಪಾಠ ಮಾಡಿದರೆ ಕಣ್ಣೊರಸಿಕೊಳ್ಳದವರು ತರಗತಿಯಲ್ಲಿ ಒಬ್ಬರೂ ಇರುತ್ತಿರಲಿಲ್ಲ.

## ಸರಸ್ವತಿ ಮಂದಿರದ ಸಾರಥ್ಯ

ಕನ್ನಡ ಸಾಹಿತ್ಯ ಪರಿಷತ್ ಜೊತೆಗಿನ ವೆಂಕಟಸುಬ್ಬಯ್ಯನವರ ಒಡನಾಟಕ್ಕೆ ಸುದೀರ್ಘ ಪರಂಪರೆ ಇದೆ. 1954ರಲ್ಲಿ ಮೊದಲು ಕಾರ್ಯದರ್ಶಿಯಾದರು. 1964ರಲ್ಲಿ ಅಧ್ಯಕ್ಷರಾದರು. ಅವರು ಅಧ್ಯಕ್ಷರಾದಾಗ ಪರಿಷತ್ತು ಸಂಕಷ್ಟದಲ್ಲಿ ಇತ್ತು. 40 ಸಾವಿರ ರೂಪಾಯಿಗಳ ಸಾಲವಿತ್ತು. ಸದಸ್ಯರ ಸಂಖ್ಯೆ ಕೂಡ ಬಹಳ ಕಡಿಮೆ ಇತ್ತು. ಸರ್ಕಾರದ ಬಳಿ ಅನುದಾನ ಕೇಳಿದರೆ, ಮೊದಲು ಸಾಲ ತೀರಿಸಿ ಎನ್ನುವ ಉತ್ತರ ಬಂದಿತು. ಬೇರೆ ಯಾರಾಗಿದ್ದರೂ ಅಧ್ಯಕ್ಷಗಿರಿಯೇ ಬೇಡ ಎಂದು ಬಿಟ್ಟು ಹೋಗುತ್ತಿದ್ದರು. ಆದರೆ, ಜಿ.ವಿ ಹಾಗೆ ಮಾಡಲಿಲ್ಲ. ಜಿದ್ದಿನಿಂದ ಓಡಾಡಿ ಹಿರಿಯರಿಂದ, ಕನ್ನಡ ಪ್ರೇಮಿಗಳಿಂದ ಅನುದಾನ ತಂದರು. ಸರಸ್ವತಿ ಮಂದಿರದಲ್ಲಿ ನಿರಂತರ ಕಾರ್ಯಕ್ರಮಗಳನ್ನು, ಪುಸ್ತಕ ಪ್ರಕಟಣೆಗಳನ್ನು ಮಾಡಿದರು. ನಂತರ ಆಗಿನ ಹಣಕಾಸು ಸಚಿವ ರಾಮಕೃಷ್ಣ ಹೆಗಡೆಯವರನ್ನು ಭೇಟಿ ಮಾಡಿ, 'ಕೆಲಸ ಮಾಡಿದ್ದೇವೆ, ಅನುದಾನ ಕೊಡಿ' ಎಂದು ಕೇಳಿದರು. ಜಿ.ವಿಯವರಿಂದಾಗಿ ಅನುದಾನ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಏರಿತು. ಎರಡು ಸಾಹಿತ್ಯ ಸಮ್ಮೇಳನಗಳು, ಪುಸ್ತಕ ಪ್ರಕಟಣೆ, ದಾಖಲೆ ಪ್ರಮಾಣದ ವಿಚಾರ ಸಂಕಿರಣಗಳನ್ನು ನಡೆಸಿದ ನಂತರ ಕೂಡ ಅಧ್ಯಕ್ಷತೆ ಬಿಡುವಾಗ ಅರವತ್ತೈದು ಸಾವಿರ ರೂಪಾಯಿಗಳ ಬ್ಯಾಲೆನ್ಸ್ ಉಳಿಸಿದ್ದರು. ಇದು ಜಿ.ವಿಯವರ ಸಾಧನೆ. ಮೈಸೂರು ಪ್ರಾಂತ್ಯಕ್ಕೆ ಹೆಚ್ಚು ಸೀಮಿತವಾಗಿದ್ದ ಪರಿಷತ್‌ಗೆ ಅಖಿಲ ಕರ್ನಾಟಕದ ಸ್ವರೂಪ ನೀಡಿದ್ದು ಜಿ.ವಿಯವರ ಹೆಗ್ಗಳಿಕೆ.

ಪರಿಷತ್ತಿನ ಪುಸ್ತಕ ಭಂಡಾರಕ್ಕೆ ವ್ಯವಸ್ಥಿತ ರೂಪ ನೀಡಿದ್ದು, ಉಪನ್ಯಾಸ ಮಂದಿರವಾಗಿ ಪರಿಷನ್ಮಂದಿರವನ್ನು ನಿರ್ಮಿಸಿದ್ದು ಸಹ ಅವರ ಸಾಧನೆಯೇ. ಇಷ್ಟೆಲ್ಲಾ ಸಾಧನೆಯ ನಂತರ ಅವರ ಪರಿಷತ್ ಅಧ್ಯಕ್ಷತೆಗೆ ಜೋತು ಬೀಳಲಿಲ್ಲ. ಅದು ನಿಂತ ನೀರಾಗಬಾರದು ಎಂಬ ಭಾವದಲ್ಲಿ ಬೇರೆಯವರಿಗೆ ಅವಕಾಶ ಕೊಟ್ಟರು. ಮುಂದೆ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಮಿತಿಗೆ ಅವರು 20 ವರ್ಷಗಳ ಕಾಲ ಸಂಪಾದಕರಾಗಿದ್ದರು. 9,000 ಪುಟಗಳ ಶಬ್ದ ಭಂಡಾರವನ್ನು ಕಟ್ಟಿದ ಹೆಗ್ಗಳಿಕೆ ಅವರದು. ಪರಿಷತ್ತಿಗೆ ಇಷ್ಟೆಲ್ಲಾ ಕೊಡುಗೆ ನೀಡಿದ್ದರೂ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಅವರಿಗೆ ತೀರಾ ತಡವಾಗಿ ಲಭಿಸಿತು. ಅವರೇ ತಮಾಷೆಗೆ ಹೇಳಿಕೊಂಡಂತೆ, 'ತನ್ನಿಂದ ಕನ್ನಡ ಕಲಿತವರಿಗೆಲ್ಲಾ ಲಭಿಸಿ ಕೊನೆಗೆ ತನ್ನ ಬಳಿ ಬಂದಿತು'. 2011ರ ಫೆಬ್ರುವರಿ 4ರಂದು ಬೆಂಗಳೂರಿನಲ್ಲಿ ನಡೆದ 77ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಅವರು ವಹಿಸಿದ್ದರು.

ಹಾಗೆ ನೋಡಿದರೆ, ಜಿ.ವಿಯವರಿಗೆ ಎಲ್ಲವೂ ವಿಳಂಬವಾಗಿಯೇ ಬಂದಿತು. ಅವರಿಗೆ 'ನಾಡೋಜ' ಗೌರವ ಸಂದಾಗ 92 ವರ್ಷ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದಾಗ 98 ವರ್ಷ, 'ಪಂಪ ಪ್ರಶಸ್ತಿ' ಬಂದಾಗ 101 ವರ್ಷ, 'ಪದ್ಮಶ್ರೀ' ಬಂದಾಗ 104 ವರ್ಷ, ಕೇಂದ್ರ ಸರ್ಕಾರದ 'ಭಾಷಾ ಸಮ್ಮಾನ' ಗೌರವ ಬಂದಾಗ 105 ವರ್ಷ. ಜಿ.ವಿ ಇದರ ಕುರಿತು ಎಂದಿಗೂ ಆಕ್ಷೇಪ ವ್ಯಕ್ತಪಡಿಸಲಿಲ್ಲ.

## ನಿಘಂಟು ಎಂಬ ಪದಕ್ಕೆ ಪರ್ಯಾಯ

ಕನ್ನಡದಲ್ಲಿ ನಿಘಂಟು ಎನ್ನುವ ಪದ ಕೇಳಿದ ಕೂಡಲೇ ನೆನಪಾಗುವುದೇ ವೆಂಕಟಸುಬ್ಬಯ್ಯನವರ